ಇವೆಲ್ಲಕ್ಕಿಂತ ಮುಖ್ಯವಾದದ್ದು ಅಂದರೆ, ನನ್ನ ಹದಿನಾಲ್ಕನೇ ವಯಸ್ಸಲ್ಲಿ ನಾನು ಹಿಡಿದ ಬಾವುಟ ನನ್ನಿಡೀ ಬದುಕಿನ ವ್ಯಸನವಾಗಿ ಮಾರ್ಪಟ್ಟಿದ್ದನ್ನು ಅನಕ್ಷರಸ್ಥನಾದ ನನ್ನಪ್ಪನಿಗೆ ಅರ್ಥ ಮಾಡಿಸೋದಕ್ಕೆ ನನ್ನಿಂದ ಆಗಲೇ ಇಲ್ಲವಲ್ಲ ಅನ್ನೋ ವೇದನೆ ಇವತ್ತಿಗೂ ನನ್ನನ್ನ ಬೆನ್ನತ್ತಿ ಕಾಡ್ತಿದೆ. ಅದರಿಂದ ನಾನು ಹೇಗೆ ಪಾರಾಗ್ಲಿ?'

## ನಾಯಕರು ಹೇಳಿದ್ದು – 3

ಇವತ್ತಿನ ಮೆರವಣಿಗೆ ಆ ಗಲಾಟೆ ಇದೆಲ್ಲದರಿಂದ ಮನೆ ತಲುಪೋದೇ ಸಂಜೆ ಆಗ್ಬಿಟ್ಟಿತ್ತು. ಮನಸ್ಸು ತುಂಬ ಕದಡಿತ್ತು. ನಿನ್ನೆ ಅರ್ಧಕ್ಕೆ ಓದಿ ನಿಲ್ಲಿಸಿದ್ದ ಸುಬ್ಬರಾಯರ 'ದುರ್ಗಾಸ್ತಮಾನ' ಕಾದಂಬರೀನ ಕೈಗೆತ್ತಿಕೊಂಡೆ. ಆಗ ಯಾರೋ ಮನೆಗೆ ಬಂದಂಗಾಯ್ತು.

'ಯಾರು?' ಅಂದೆ.

'ನಾಯಕರ ಮನೇ ಇದೇನಾ?' ಅನ್ನೋ ಪ್ರಶ್ನೆ ಅತ್ತಲಿಂದ ಬಂತು.

'ಹೌದು ಯಾಕೆ? ನಿಮಗ್ಯಾರು ಬೇಕು?' ಅನ್ನುತ್ತ ಎದ್ದು ಬಂದೆ.

ಆತ ನನ್ನನ್ನ ನೋಡಿದ ಕೂಡಲೇ, 'ಅರೆ ಅಣ್ಣ ಹೇಗಿದ್ದೀರಿ?' ಎನ್ನುತ್ತ ಒಳಗೆ ಬಂದೇ ಬಿಟ್ಟ.

ಯಾರೋ ನನಗೆ ಬೇಕಾದವರೇ ಇರ್ಬೇಕು ಅಂತನ್ನಿಸ್ತು. ಬಿಸಿಲಿನ ಹೊತ್ತು ಸುಸ್ತಾಗಿರ್ತದೆ ಅನ್ನಿಸಿ 'ನೀರು ಬೇಕಾ?' ಅಂತ ಕೇಳಿದೆ.

'ಊನಣ್ಣ ಕೊಡಿ. ತುಂಬ ದಾಹ ಆಗ್ತಿದೆ' ಅಂದ. ನೀರು ತಂದು ಕೊಟ್ಟೆ.

'ಬೆಂಗಳೂರು ಏನಣ್ಣ ಸೈತಾನ್ ತರ ಬೆಳೆದ್ಬಿಟ್ಟಿದೆ. ಆ ಮೆರವಣಿಗೇದು ಬೇರೆ ಗಲಾಟೆ ಆಯ್ತಲ್ಲ. ನನಗೆ ಇನ್ನಷ್ಟು ಕಷ್ಟ ಆಗಿಬಿಡ್ತು ನೋಡಿ' ಎಂದು ಹೇಳುತ್ತ ಅಲ್ಲಿದ್ದ ಪೇಪರ್ ತಗೊಂಡು ಗಾಳಿ ಬೀಸಿಕೊಂಡ. ಮಾತಾಡಿದ ರೀತಿ ನೋಡಿ ಬಂದಿದ್ದು ಯಾರೆಂದು ಗೊತ್ತಾಯ್ತು ನನಗೆ.

'ನೀನು ಅಫ್ಜಲ್ ಅಲ್ವೇನಯ್ಯಾ?' ಅಂದೆ.

'ಹೌದಣ್ಣ ಅಫ್ಜಲ್ಲಾನೇ. ಅಂತೂ ನನ್ನ ನೆನಪಾಯ್ತಲ್ಲ' ಅವನ ಮಾತಲ್ಲಿ ಖುಷಿ ಕಾಣಿಸ್ತು.

'ಇಲ್ಲಪ್ಪ ನಂಗೆ ನೆನಪಿದೆ. ನಿನಗೇ ನನ್ನ ನೆನಪಿಲ್ಲ ಅಷ್ಟೆ. ಎಷ್ಟು ವರ್ಷ ಆಯ್ತು ನಿನ್ನ ನೋಡಿ' ನಯವಾಗಿ ಆಕ್ಷೇಪಿಸಿದೆ.

'ಏನಣ್ಣ ನಿಮ್ಮನ್ನ ಮರಿಯೋದಾ? ಹೀಗೇ ಇರ್ತದಲ್ಲ ಬದುಕಿನ ಜಂಜಾಟ. ಅಣ್ಣ ಈ ಫೋಟೊ ನೋಡಿ. ಇವನ್ನೆಲ್ಲ ನಿಮಗೇಂತ ತಂದಿದ್ದೀನಿ' ಎನ್ನುತ್ತ ತನ್ನ ಚೀಲದಿಂದ ಒಂದಷ್ಟು ಫೋಟೊ ತೆಗೆದ.

ನಾನು ಹೋರಾಟಗಳಲ್ಲಿ ಭಾಗಿಯಾಗಿದ್ದಾಗಿನ ಫೋಟೊಗಳವು. ನನ್ನ ಮನಸ್ಸನ್ನು ಆರ್ದ್ರವಾಗಿಸಿದ ಅವುಗಳನ್ನು ಮೃದುವಾಗಿ ನೇವರಿಸ್ತ, 'ನಿನಗೆಲ್ಲಿ ಸಿಕ್ತಪ್ಪ ಅಫ್ಜಲ್ ಈ ಫೋಟೊ?' ಎಂದೆ.

'ನನ್ನ ಚಿತ್ರದುರ್ಗದ ಸ್ನೇಹಿತನ ಮನೇಲಿತ್ತಣ್ಣ. ನಿಮ್ಮ ಜೊತೇಲಿದ್ದರಲ್ಲ ಶಾಂತವೀರಯ್ಯ. ಅವರ ಮಗಾನೆ ಇವನು. ಶಾಂತವೀರಯ್ಯನೋರು ತೀರ್ಕೊಂಡು ನಾಲ್ಕು ವರ್ಷ ಆಯ್ತಂತೆ. ಅವರ ಮನೇಲಿದ್ದ ಈ ಫೋಟೊನೆಲ್ಲ ನಿಮಗೆ ಕೊಡೂಂತ ಕೊಟ್ಟ. ನಾನೂ ನಿಮ್ಮನ್ನ ನೋಡ್ಬೇಕೂಂತ ತುಂಬಾ ದಿನಗಳಿಂದ ತವಕಿಸ್ತಾ ಇದ್ದೆ. ಈ ನೆಪದಲ್ಲಾದ್ರೂ ಬರುವಂಗಾಯ್ತು ನೋಡಣ್ಣ' ಎಂದ ಅಫ್ಜಲ್.